

‘ಮರಿಯಾ, ಯಷ್ಟು ದಿನ ಆತಪಾ ನಿಂಗ ಸಾಲಾ ಕೊಟ್ಟು. ಇವತ್ತು ಕೊಡ್ತೀನಿ ನಾಳ್ಳ ಕೊಡ್ತೀನಿ ಅಂತಂದು ಬರೀ ಹಿಂಗಾ ಹೇಳ್ಕ್ಯಂತ ಹೊಂಟಿ... ನಮಗೂ ಕೇಳಿ ಕೇಳಿ ಸಾಕಾಗೈತಿ. ಇವತ್ತು ಯಾಡ್ರಾಗ ಒಂದ್ ಹೇಳ್ಬುಡು... ರೊಕ್ಕಾ ಕೊಡ್ತೀಯಾ ಇಲ್ಲ ರೊಕ್ಕಾ ಕೊಡೊಮಟ ಹೊಲ ನನಗಾಕ್ತೀಯಾ... ಎರಡ ದಿನ ಟೈಮ್ ಕೊಡ್ತೀನಿ, ಏನ್ ಮಾಡ್ತೀ ನೋಡು... ಬರ್ತೀನಿ’ ಅಂತ ಮನೆಬಾಗಿಲಿಗೆ ಬಂದು ಖಡಾಖಂಡಿತವಾಗಿ ಹೇಳಿಬಿಟ್ಟು ಸರಕ್ಕನೆ ಮುಖ ತಿರುಗಿಕೊಂಡು ಕಾಲ್ಕಿತ್ತಿದ್ದ ಸಾಹುಕಾರ ಔಟಪ್ಪ. ಅವನ ಮಾತುಗಳಿಗೆ, ಭೂಮ್ತಾಯಿಯ ಈಗಿನ ಸ್ಥಿತಿಗೆ, ತನ್ನ ಅಸಹಾಯತೆಗೆ ನೊಂದುಕೊಂಡಿದ್ದ. ಮರಿಯಪ್ಪನೆದೆಯಾಳಕ್ಕೆ ಔಟಪ್ಪನ ಮಾತುಗಳಿಂದಾಗಿ ಕಾಯ್ದು ಹೊಯ್ದಾಡುವ ಕಡಾಯಿಯ ಎಣ್ಣೆಯನ್ನು ಎತ್ತಿ ಒಮ್ಮೆಲೆ ಸುರಿದಂತಾಗಿತ್ತು.

ಔಟಪ್ಪ ಸಾಹುಕಾರನ ಬಳಿ ಮರಿಯಪ್ಪ ಹೋದ ವರ್ಷ ಸಾಲಾ ತಗೊಂಡು ಹೊಲ ಹದಗೊಳಿಸಿ ಭೂಮ್ತಾಯಿ ಒಡಲಿಗೆ ಬೀಜ ಕಲಸಿದ್ದ. ಮಳೆದೇವ ಮತ್ತು ಭೂಮ್ತಾಯಿ ಮೇಲೆ ಭಾರ ಹಾಕಿ ನಿಟ್ಟುಸಿರು ಬಿಟ್ಟಿದ್ದ. ಕೈಕೊಟ್ಟಿದ್ದ ಮಳೆಯಿಂದ ಮೆಕ್ಕೆಜೋಳದ ಬೆಳೆ ಗೇಣುದ್ದ ಮೇಲೆದ್ದು ಬಿಸಿಲಿನ ಹೊಡೆತಕ್ಕೆ ಸೊರಗಿ ಒಣಗಿ ನೆಲಕಚ್ಚಿಬಿಟ್ಟಿತ್ತು. ಒಂದು ಕಾಳು ಕೂಡಾ ಕೈಗೆ ಹತ್ತದೆ ಮರಿಯಪ್ಪ ಪೂರಾ ಕೈಸುಟ್ಟುಕೊಂಡಿದ್ದ. ಹೀಗಾಗಿ, ಬೆಳೆಬಂದ ಮೇಲೆ ಮುಟ್ಟಿಸುವ ಕರಾರಿನ ಮೇಲೆ ಔಟಪ್ಪ ಸಾಹುಕಾರನಲ್ಲಿ ತಗೊಂಡಿದ್ದ ಸಾಲ ಬಡ್ಡಿಯನ್ನು ಬೆಳೆಸುತ್ತಲೇ ಇತ್ತು.

ಈ ವರ್ಷವಾದರೂ ಚೊಲೋತನಾಗಿ ಮಳೆಯಾದರೆ ಬೆಳೆತೆಗೆದು ಔಟಪ್ಪ ಸಾಹುಕಾರನಿಂದ ಋಣ ಮುಕ್ತವಾಗಬೇಕು ಎಂದುಕೊಂಡಿದ್ದ ಮರಿಯಪ್ಪನಿಗೆ ಮಳೆ ಆಗಲೇ ಕಣ್ಣಾಮುಚ್ಚಾಲೆ ಆಟ ಆಡುತ್ತಿರುವುದು ಬಹಳ ಸಂಕಷ್ಟಕ್ಕೀಡುಮಾಡಿತ್ತು. ಅಂತಹುದರಲ್ಲಿ ಸಾಹುಕಾರ ಹೊಲವನ್ನೇ ಕಸಿದುಕೊಂಡು ಒಡಲಿಗೆ ಕೊಳ್ಳಿ ಇಡಲು ಮುಂದಾಗಿರುವುದು ಮರಿಯಪ್ಪನಿಗೆ ಮುಂದಿನ ದಿಕ್ಕು ತಿಳಿಯದಂತಾಗಿತ್ತು.



ಸೂರ್ಯನಾಗಲೆ ಈ ಕಡೆ ಪಡುವಣಕ್ಕೆ ತಿರುಗಿ ಇನ್ನೇನು ತಾಸ್ಹೊತ್ತಿನಲ್ಲಿ ಮರೆಯಾಗುತ್ತಾನೆನ್ನುವ ಸಮಯವಾಗಿತ್ತು. ಎದ್ದುನಿಂತು ಸುತ್ತಲೂ ಆಗಸದತ್ತ ಕಣ್ಣಾಡಿಸಿದಾಗ ದೂರ ದೂರದಲ್ಲಿ ಅಲ್ಲೊಂದು ಇಲ್ಲೊಂದು ಸಣ್ಣ ಸಣ್ಣ ಬಿಳಿ ಮೋಡಗಳು ಬಿಸಿಲಿಗೆ ಚಿನ್ನದ ಬಣ್ಣ ತಳೆದು ಮಿಂಚುತ್ತಿದ್ದವು. ಸಂಕಟಗೊಂಡ ಮರಿಯಪ್ಪ ಕಣ್ಮುಚ್ಚಿ ಮುಖ ಕಿವುಚಿಕೊಂಡು ದೀರ್ಘ ಉಸಿರು ಬಿಟ್ಟು ಗೋಣಲ್ಲಾಡಿಸಿದ. ಮನೆ, ಮಡದಿ, ಮಗನ ಕಡೆಗೆ ಜೀವ ಹರಿದು ಊರ ಕಡೆಗೆ ಹೆಜ್ಜೆ ಹಾಕಿದ ಮರಿಯಪ್ಪ. ಊರ ಮುಂದಿನ ಹಳ್ಳದ ಇತ್ತ ಕಡೆಯ ದಿಬ್ಬ ಹತ್ತಿ ಹೊಲದ ದಿಕ್ಕಿನತ್ತ ತಿರುಗಿ ನೋಡಿದಾಗ ಇದ್ದಬಿದ್ದ ಬಿಳಿಯ ಮೋಡಗಳು ಕರಗಿ ಕಣ್ಮರೆಯಾಗಿ, ಸ್ವಚ್ಛಂದ ಸಂಜೆಯ ಆಗಸದಲ್ಲಿ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಾ ಹಿಂಡು ಹಿಂಡಾಗಿ ಗೂಡುಗಳ ಕಡೆಗೆ ಮುಖಮಾಡಿದ್ದವು.

ಮನೆಗೆ ಬಂದ ಮರಿಯಪ್ಪ ಕೈಕಾಲು ತೊಳೆದುಕೊಂಡು ಒಳನಡೆದ. ಇತ್ತ ಹಿತ್ತಲಲ್ಲಿ ಹೆಂಡತಿ ಚೆನ್ನಮ್ಮ ಮುಸುರೆ ಪಾತ್ರೆ ತಿಕ್ಕಿ ತೊಳೆದುಕೊಂಡು ಒಳಬಂದಳು. ಮರಿಯಪ್ಪನನ್ನು ನೋಡಿದಾಕೆ, ‘ಯಾಕ, ಯದಕ್ಕ ಹೋಗಿದ್ದಿ. ಮುಂಜಾನೆದ್ದು ಕೂಳು ತಿನ್ದಾ ಹೋಗಿ ಈಗ ಬಂದೀ. ಹ್ವೊಟ್ಟೀಮ್ಯಾಲ ಸ್ವಲ್ಪ ಕಬರು ಐತೆನು ನಿನಗ’ ಎಂದು ಜೋರು ಮಾಡಿ, ಬಂದ ಗಂಡನಿಗೆ ಒಲೆ ಹೊತ್ತಿಸಿ ಇದ್ದಬದ್ದ ಸಕ್ಕರೆ ಹಾಕಿ ಚಹಾಕಿಟ್ಟಳು. ಆಡಲು ಹೋಗಿದ್ದ ಮಗ ಕಲ್ಲಾ ಬಂದು ಅಪ್ಪನ ಮಗ್ಗುಲು ತೊಡೆಗೆ ಆನಿಸಿ ಕೂತು, ‘ಯಪ್ಪಾ ಯ್ಯೊ’ ಎನ್ನುತ್ತಾ ತೋರುಬೆರಳು ತೋರಿಸಿದ. ಬಕ್ಕಣದಲ್ಲಿಯ ಒಂದು ರೂಪಾಯಿ ಗಟ್ಟಿ ತೆಗೆದು ಮಗನ ಕೈಗಿಟ್ಟ ಮರಿಯಪ್ಪ ಕಲ್ಲನ ತಲೆ ನೇವರಿಸಿದ. ಕಲ್ಲಾ ಹೊರಗಡೆ ಹಿಗ್ಗಿನಿಂದ ಸಡಿಲ ಚಡ್ಡಿ ಹಿಡಿದುಕೊಂಡು ಓಡಿ